ಹೊತ್ತು ಮುಳುಗುವ ಹೊತ್ತಿಗೆ ಕೆರೆಯ ಬಳಿ ಇದ್ದವರೆಲ್ಲ ಊರಿಗೆ ಬಂದರು. ಅವರ ಜತೆ ಇಬ್ಬರೂ ಎಚ್ಚಿಗಳೂ. ಅವರು ನೇರವಾಗಿ ಎಲ್ಲಿಗೆ ಹೋಗುವುದೆಂದು ತಿಳಿಯದೆ ಕಮಲಮ್ಮನ ಹೋಟೆಲಿಗೆ ಹೋಗಿ ಕೂತರು. ರಾತ್ರಿ ತಮ್ಮ ಊಟಕ್ಕೆ, ವಸತಿಗೆ ಯಾರು ವ್ಯವಸ್ಥೆ ಮಾಡುತ್ತಾರೆ ಎನ್ನುವುದೇ ಅವರಿಗೆ ಚಿಂತೆಯಾಗಿತ್ತು.

ಕಾಫಿ ಕುಡಿದು ದಣಿವಾರಿಸಿಕೊಂಡರು. ಆ ಮೇಲೆ ಚೇರ್ಮನ್ನರ ಮನೆಗೆ ಹೋದರು. 'ಬೆಳಿಗ್ಗೆ ಸಿಐ ಸಾಹೇಬರು ಬರೋದರೊಳಗೆ ಎಲ್ಲಿಂದಲಾದ್ರೂ ಒಂದು ತೆಪ್ಪ ತರಿಸಿ... ತೆಪ್ಪ ಸಿಕ್ಕಲಿಲ್ಲ ಅಂತಾದರೆ, 15–20 ದೊಡ್ಡ ಬೊಂಬುಗಳನ್ನು ತರಿಸಿ, ಏಳೆಂಟು ಅಡಿಗೊಂದರಂತೆ ಕತ್ತರಿಸಿ ನೀವೇ ಎರಡು ತೆಪ್ಪ ಕಟ್ಟಿಸಿ. ಅದರಲ್ಲೇ ಇಬ್ಬರು ಕುಂತು ಹೆಣಗಳ ತನಕ ಸಲೀಸಾಗಿ ಹೋಗಿ ಬರೋಹಂಗಿರಬೇಕು. ಹೆಣಗಳಿಗೆ ಹಗ್ಗ ಕಟ್ಟಿ ಎಳಕೊಂಡು ಬಂದರಾತು. ಇಬ್ಬರೊ, ಮೂವರೊ ಈಜು ಬರೋರು ಹೋದರೆ ಸಾಕು' ಅಂತ ಚೇರ್ಮನ್ನರಿಗೆ ಮಾರ್ಗದರ್ಶನ ಮಾಡಿದರು. ರಾತ್ರಿ ನಮ್ಮ ಊಟ, ವಸತಿಗೆ ವ್ಯವಸ್ಥೆ ಮಾಡಿ ಅಂತ ಅಧಿಕಾರಯುತವಾಗಿ ಹೇಳಿದರು. 'ಕಮಲಮ್ಮನ ಹೋಟ್ಲಲ್ಲಿ ಊಟ ಮಾಡ್ರಿ, ಪಂಚಾಯ್ತಿ ಆಫೀಸಲ್ಲಿ ಮಲಗಿ. ಇಷ್ಟೇ ನಮ್ಮಲ್ಲಿರೋ ಸೌಕರ್ಯ' ಅಂತ ಚೇರ್ಮನ್ನರು ಹೇಳಿದರಲ್ಲದೆ ತಿಮ್ಮರಾಯಿ ಜತೆ ಅವರನ್ನು ಕಳಿಸಿಕೊಟ್ಟರು.

## 4

ರಾತ್ರಿ ಹತ್ತು ಗಂಟೆ ದಾಟಿದ ಮೇಲೆ ಚೇರ್ಮನ್ನರು ನಡೆದುಕೊಂಡೇ ಮಸ್ತಾನ್ ಮನೆಗೆ ಹೋದರು. ಅವನ ಜತೆ ಮಾತಾಡಿ ಒಪ್ಪಿಸಲು ಪ್ರಯತ್ನಿಸಿದರು. ಏಳೆಂಟು ವರ್ಷಗಳ ಹಿಂದೆ ಮಸ್ತಾನ್ ಇದೇ ಕೆರೆಯಲ್ಲಿ ಮೀನು ಹಿಡಿದನೆಂದು ಊರವರು ಪಂಚಾಯ್ತಿ ಕಟ್ಟೆಗೆ ಕರೆಸಿ ತರಾಟೆಗೆ ತೆಗೆದುಕೊಂಡಿದ್ದರಲ್ಲದೆ ನೂರಾಒಂದು ರೂಪಾಯಿ ದಂಡ ಹಾಕಿ ವಸೂಲು ಮಾಡಿದ್ದನ್ನು ಅವನು ಮರೆತಿರಲಿಲ್ಲ. ಮತ್ತೆ ಕೆರೆಯಲ್ಲಿ ಮೀನು ಹಿಡಿದರೆ ಊರಿಂದ ಓಡಿಸುವುದಾಗಿ ಕೆಲವರು ಎಚ್ಚರಿಕೆ ನೀಡಿದ್ದರು.

'ಸಾಬರು ಕೆರೆಗೆ ಇಳಿದರೆ ನೀರಿಗೆ ಮೈಲಿಗೆ ಆಗುತ್ತೆ ಅಂತ ಅವತ್ತು ಊರು ಹೇಳಿತ್ತಲ್ಲ ಸ್ವಾಮೀ... ಅವತ್ತಿನ ಪಂಚಾಯ್ತಿಯಲ್ಲಿ ನೀವೂ ಇದ್ರಿ. ಈಗ ನಾನು ತೆಪ್ಪದಲ್ಲಿ ಕುಂತು ಹೋದರೆ ಮೈಲಿಗೆ ಆಗಲ್ವ?' ಅಂತ ಕೇಳುವ ಮೂಲಕ ಮಸ್ತಾನ್ ಹಳೆಯದನ್ನು ನೆನಪು ಮಾಡಿದ.

'ನಾನು ಕೆರೆಗೆ ಇಳಿದರೆ ಮೈಲಿಗೆ ಆಗುತ್ತೆ ಅನ್ನದೆಲ್ಲ ಸುಳ್ಳು. ಎಲ್ಲೆಲ್ಲೊ ಬಿದ್ದ ಮಳೆ ನೀರು ಎಲ್ಲೆಲ್ಲೊ ಹರಿದಾಡಿ ಹೇಲು, ಉಚ್ಚೆ, ಸಗಣಿ ಎಲ್ಲಾನೂ ಬಾಚಿಕೊಂಡು ಬಂದು ಕೆರೆಯಲ್ಲಿ ನಿಂತಿದೆ. ಅಂಥ ನೀರಿಗೆ ಮೈಲಿಗೆ ಎಲ್ಲಿಂದ ಆಗುತ್ತೆ. ಅದು ನೀವು ಮಾಡಿಕೊಂಡಿರೋ ಮಡಿ, ಮೈಲಿಗೆ. ಸಾಬರು ಕೆರೆಯ ನೀರು ಮುಟ್ಟೋದು ಊರ ಜನಕ್ಕೆ ಇಷ್ಟ ಆಗಲ್ಲ...' ಅಂತ ವಿನಯದಿಂದಲೇ ಹೇಳಿದ.

'ನನ್ನ ಮಗ ಇಮ್ರಾನ್ ನೀನು ಕೆರೆ ಹತ್ರಕ್ಕೆ ಹೋಗಲೇಬೇಡ ಅಂತ ಹೇಳಿದಾನೆ. ಯಾರಾದರೂ ಕೆರೆಗೆ ಇಳಿದು ಹೆಣಗಳನ್ನು ಎತ್ತು ಅಂತ ಒತ್ತಾಯ ಮಾಡಿದರೆ ನಂಗೆ ಫೋನ್ ಮಾಡು ಅಂತ ಇವತ್ತು ಬೆಳಿಗ್ಗೆನೂ ಹೇಳಿದ. ನಿಮಗೆ ಗೊತ್ತಲ್ಲ, ಈಗ ಅವನು ಪರಶುರಾಂಪುರ ಸ್ಟೇಷನ್‌ನಲ್ಲಿ ಹೆಡ್ ಕಾನ್‌ಸ್ಟೆಬಲ್ಲು. ಮೂರು ದಿನಗಳಿಂದ ನಂಗೆ ಬಿಟ್ಟು ಬಿಟ್ಟೂ ಜ್ವರ ಬರ್ತಲೇ ಇದೆ. ಕೆರೆಗೆ ಇಳಿದರೆ ಚಳಿಗೆ ಸತ್ತೇ ಹೋಗ್ತೀನಿ... ಯಾರಾದರೂ ಕೇರಿ ಹುಡುಗರನ್ನು ಕಳಿಸಿ ಅವರೂ ನಿಮ್ಮ ಧರ್ಮದವರೇ ಅಥವಾ ನಿಮ್ಮವರನ್ನೇ ತೆಪ್ಪದಲ್ಲಿ ಕಳಿಸಿ. ಹೋಗಿ ಹೆಣಗಳನ್ನು ಎಳಕೊಂಡು ಬರಲಿ' ಎಂದು ಚೇರ್ಮನ್ನರ ಮುಖ ನೋಡುತ್ತ ಸಹಜವಾಗಿ ಹೇಳಿದ.

'ಹೌದಯ್ಯ ಮಸ್ತಾನು, ನೀನು ಹೇಳೋದರಲ್ಲಿ ನ್ಯಾಯ ಐತೆ' ಎಂದು ಹೇಳತ್ತ ಚೇರ್ಮನ್ನರು ಮುಖ ಹುಳ್ಳಗೆ ಮಾಡಿಕೊಂಡು ಮನೆಗೆ ಬಂದಿದ್ದರು. ಆ ಮೇಲೆ ತಮ್ಮ ಬೆಂಬಲಿಗರನ್ನು ಮನೆಗೆ